ಪೆರಾಲಿಸಿಸ್ ಪೇಷಂಟ್. ಮನೆ ಬಾಡಿಗೆ ಏಳು ಸಾವಿರ. ಅಪ್ಪನಿಗೆ ಆರು ಸಾವಿರ ಸಂಬಳ. ಅವರು ಕೆಲಸ ಮಾಡೋದು ಖಾಸಗಿ ಶಾಲೆಯಲ್ಲಿ. ಮೂವತ್ತು ವರ್ಷಗಳಿಂದ ಅದೇ ಕೆಲಸ. ಸಣ್ಣ ಸಂಬಳದಿಂದಲೇ ಜೀವನ ಮಾಡ್ತಾ ಇದ್ದಾರೆ. ಜಾಸ್ತಿ ಸಂಬಳ ಕೊಡ್ತಿವಿ ಅಂತ ಬೇರೆ ಶಾಲೆಯವರು ಕರೆದ್ರು ಕೂಡ ಹೋಗಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ನನಗೆ ಅವರನ್ನ ಬಿಟ್ಟು ಎಲ್ಲೂ ಹೋಗೋ ಮನಸಿಲ್ಲ. ಹೋದರೂ ಮನಃಶಾಂತಿಯಿಂದ ಬದುಕಲಾರೆ. ಜನ್ಮ ಕೊಟ್ಟ ಅವರ ಋಣ ತೀರಿಸುವ ಅವಕಾಶ ಬಂದಾಗ ಮತ್ತೆ ಹಿಂದೆ ಹೋಗಬಾರದು. ತುಂಬಾ ಕಷ್ಟಕಾಲದಲ್ಲಿ ಅವರು ಇದ್ದ ಸ್ವಲ್ಪ ಜಮೀನನ್ನೇ ಮಾರಿ ವಿದ್ಯಾಭ್ಯಾಸ ಮಾಡಿಸಿದ್ರು. ಮದುವೆ ಮಾಡಿರೋ ಸಾಲ ಇನ್ನೂ ತೀರಿಲ್ಲ. ಪ್ಲೀಸ್ ನನ್ನ ಅರ್ಥಮಾಡ್ಕೋ'' ಎಂದು ಬಿಕ್ಕಳಿಸಿದಳು. ಸಂಜೀವ್ ಮನಸ್ಸಿಗೆ ಒಂಥರಾ ಅನಿಸಿತು.

``ಪ್ಲೀಸ್ ಕಂಟ್ರೋಲ್ ಯುವರ್ ಸೆಲ್ಫ್, ಶ್ರಾವ್.''

ಭಾರವಾದ ಮನಸ್ಸಿನಿಂದ ಹೊರ ಬಂದ ಸಂಜೀವ್.

ಇಡೀ ಒಂದು ವಾರ ಇಬ್ಬರ ಮಧ್ಯೆ ಸಂಘರ್ಷ ನಡೆಯುತ್ತಲೇ ಇತ್ತು. ಆ ದಿನ ಒಂದು ದೃಢ ನಿರ್ಧಾರದೊಂದಿಗೆ ಸ್ರವಂತಿಯ ಮನೆ ಕಡೆ ಕಾಲೆಳೆಯುತ್ತಿದ್ದಾಗ ಫೋನ್ ರಿಂಗಣಿಸಿತು.

``ನೀನು ರಾಕ್ಷಸ! ಅಪ್ಪ, ಅಮ್ಮನ್ನ ಬಲಿ ತಗೊಂಡೆಯಲ್ಲೋ'' ಸ್ರವಂತಿ ಚೀರುತ್ತಿದ್ದಳು.

ವಿಷಯ ತಿಳಿದು ಶಾಕ್‌ನಿಂದ ತತ್ತರಿಸಿದ ಸಂಜೀವ್. ದುಃಖ ತಡೆಯಾಗಲಿಲ್ಲ. ಅಳುತ್ತಲೇ ಶೈಲಜಾಗೆ ವಿಷಯ ತಿಳಿಸಿದ.

ಶೈಲಜಾ ಕೂಡ ಶಾಕ್‌ನಿಂದ ಹೊರ ಬರಲು ತುಂಬಾ ಸಮಯ ಬೇಕಾಯಿತು.

ಆ ದಿನ ಬೆಳಗಿನ ಜಾವ ಶೈಲಜಾಳನ್ನು ನಿದ್ದೆಯಿಂದ ಎಬ್ಬಿಸಿ ಸಂಜೀವ್ ಕೇಳಿದ ಮಾತು ಈಗಲೂ ಅವಳಿಗೆ ನಂಬಲು ಆಗುತ್ತಿಲ್ಲ. ಪದೇ ಪದೇ ಕಿವಿಯಲ್ಲಿ ಕೇಳಿ ಬರುತ್ತಿವೆ.

``ಶೈಲೂ, ನಾನು ಒಂದು ಮಾತು ಕೇಳ್ಲಾ? ಇಲ್ಲ ಅನ್ನಬಾರದು.''

``ಹೇಳಿ, ನೀವು ಕೇಳಿದ ಮಾತಿಗೆ ಯಾವತ್ತು ಇಲ್ಲ ಅಂದಿಲ್ಲ ತಾನೆ.''

``ನನಗೆ ಅಮ್ಮ, ಅಪ್ಪ ಇಲ್ಲ. ಅನಾಥವಾಗಿ ಬೆಳೆದಿರೋ ನನಗೆ ನಿನ್ನ ಪ್ರೀತಿನೆ ಒಂದು ಆಸ್ತಿ. ಇದಕ್ಕೆ ನಿನಗೆ ಜೀವನ ಪೂರ್ತಿ ಋಣದಲ್ಲಿರ್ತೀನಿ. ಮತ್ತೊಂದು ವರ ನಿನ್ನಿಂದ ಬೇಕು ಶೈಲೂ. ನನಗೆ ಅಮ್ಮ, ಅಪ್ಪನನ್ನೂ ಕೊಡು'' ಅಂದಾಗ ಆಶ್ಚರ್ಯದಿಂದ ನೋಡಿದ್ದಳು ಶೈಲಜಾ. ಸಂಜೀವ್ ಏನು ಮಾತನಾಡ್ತಾ ಇದ್ದಾರೋ ಮೊದಲು ಅರ್ಥವಾಗಲಿಲ್ಲ. ಬಿಡಿಸಿ ಹೇಳಿದ ಸಂಜೀವ್.

``ಶೈಲೂ ಸ್ರವಂತಿಯ ಅಪ್ಪ ಅಮ್ಮಂದಿರನ್ನು ದತ್ತು ತಗೋಬೇಕೆಂದಿದ್ದೇನೆ. ಅದಕ್ಕೆ ನಿನ್ನ ಒಪ್ಪಿಗೆ ಬೇಕು.''

ಶೈಲಜಾ ಸಂಜೀವ್ ಕಣ್ಣಲ್ಲಿ ನೋಡಿದಳು.

ಒಂದು ಕ್ಷಣ ಮೌನವಾಗಿ ಏನು ಮಾತನಾಡಲಿಲ್ಲ. ತನ್ನ ಒಪ್ಪಿಗೆ ಇದೆಯೆಂದು ಹಣೆಗೆ ಮುತ್ತಿಟ್ಟಾಗ ಸಂಜೀವನಿಗಾದ ಸಂತೋಷ ಅಷ್ಟಿಷ್ಟಲ್ಲ. ಆದರೆ ದೈವ ಬೇರೊಂದನ್ನು ಬಗೆದಿತ್ತು.

★★★

ಕೃಷ್ಣಮೂರ್ತಿ, ಅನ್ನಪೂರ್ಣರ ಎಲ್ಲಾ ವಿಧಿಗಳನ್ನ ಮಗನಾಗಿ ನಿಂತು ಪೂರೈಸಿದ ಸಂಜೀವ್ ಸ್ರವಂತಿ ಬಳಿ ಬಂದು ಕೈಮುಗಿದು ನಮಸ್ಕರಿಸಿದ.

``ಕ್ಷಮಿಸಿ ಬಿಡು ಸ್ರವಂತಿ. ಅಮ್ಮ ಅಪ್ಪ ಇಷ್ಟು ದೊಡ್ಡ ನಿರ್ಧಾರ ತೆಗೆದುಕೊಳ್ತಾರೆ ಅಂತ ಊಹೆ ಕೂಡ ಮಾಡೋಕೆ ಆಗಲಿಲ್ಲ.''